O.S. 162/2016
ಪಿ ಡಬ್ಲೂ 2

<u>**ಸಾಕ್ಷಿಯನ್ನು ದಿನಾಂಕಃ 30-08-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**</u>

<u>**ಪಾಟೀ ಸವಾಲು ಪ್ರತಿವಾದಿ ಪರ ವಕೀಲರವರಿಂದಃ**</u>

ವಾದಿಯು ದಾಖಲು ಮಾಡಿರುವ ಕೇಸಿನ ಕುರಿತು ನನಗೆ ಮಾಹಿತಿ ಇದೆ. ವಾದಿಯು ಯಾವ ದಾಖಲೆಯನ್ನು ಅಂದರೆ ಯಾವ ಪತ್ರವನ್ನು ಹಾಜರುಪಡಿಸಿವರು ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯ ಕುರಿತು ನಾನು ವಾದಿಯನ್ನು ವಿಚಾರಿಸಿರುವುದಿಲ್ಲ. ನಾನು, 1 ನೇ ಪ್ರತಿವಾದಿ ಹಾಗೂ ಆತನ ಮಗ ರವೀಂದ್ರ ಎಲ್ಲರೂ ವಿಶ್ವಾಸಿಕರು ಎಂದರೆ ಸರಿ. ಅವರೆಲ್ಲರೂ ಕೃಷಿ ಅಥವಾ ಇನ್ನಾವುದೇ ವ್ಯವಹಾರವನ್ನು ಹರಪನಹಳ್ಳಿಯಲ್ಲಿ ಮಾತ್ರ ಮಾಡುವರು ದಾವಣಗೆರೆಯಲ್ಲಿ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಾವು ಇಬ್ಬರು ಅಣ್ಣ ತಮ್ಮಂದಿರು ಇದ್ದೇವೆ. ನನ್ನ ತಂದೆ 9 ವರ್ಷಗಳ ಹಿಂದೆ ತೀರಿಕೊಂಡರು.

ನನ್ನ ತಂದೆ ಜೀವಂತ ಇದ್ದಾಗ ಖರೀದಿ ವ್ಯವಹಾರವನ್ನು ನಮ್ಮ ಮನೆತನದ ಆಸ್ತಿಗೆ ಸಂಬಂಧಿಸಿದಂತೆ ಮಾಡಿರುವರು. ನಾನು ಆ ಖರೀದಿ ಪತ್ರವನ್ನು ನೋಡಿದ್ದೇನೆ. ನಿಮ್ಮ ತಂದೆ ಜೀವಂತ ಇದ್ದಾಗ ವಿಭಾಗ ಮಾಡಿಕೊಂಡಿರೋ ಅಥವಾ ನಂತರ ವಿಭಾಗ ಮಾಡಿಕೊಂಡಿರೋ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು ವಿಭಾಗ ಆಗಿರುವುದಿಲ್ಲ ಎಂದು ನುಡಿದರು. ಸದರಿ ಖರೀದಿ ಪತ್ರ ನನ್ನ ಬಳಿ ಇರುವುದು.ನಾನು 1 ನೇ ಪ್ರತಿವಾದಿ, ವಾದಿ ಹಾಗೂ 1 ನೇ ಪ್ರತಿವಾದಿಯ ಮಗ ರವೀಂದ್ರ ವಿಶ್ವಾಸದಲ್ಲಿರುವ ಕಾರಣ 2 ಮತ್ತು 3 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹಿತ ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಕೆ ಜಿ ನಿಂಗಪ್ಪ, ಪಶ್ಚಿಮಕ್ಕೆ ನಾಗಲಿಂಗಪ್ಪ, ಉತ್ತರಕ್ಕೆ ಕೆಂಚಪ್ಪ ಹಾಗೂ ದಕ್ಷಿಣಕ್ಕೆ 1 ನೇ ಪ್ರತಿವಾದಿಯ ಆಸ್ತಿ ಇರುವುದು.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

30.08.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**